# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 211/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 16-07-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಚಂಬಣ್ಣಾ ಕಾಸರ | | **ಪ್ರಾ.ಸಾ ಃ 09** |
| **ತಂದೆ ಃ ಗಂಡ ಹೆಸರು** | ಃ ಗಂಗಪ್ಪ | | **ಚಾ.ಸಾ ಃ 07** |
| **ವಯಸ್ಸು** | ಃ 42 ವರ್ಷ | | |
| **ಉದ್ಯೋಗ** | ಃ ಕೂಲಿ | | |
| **ವಾಸಸ್ಥಳ** | ಃ ಜುಂಜನಬೈಲ ತಾಂಡಾ | | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ನನ್ನ ಕಾಕನ ಮಗ. ಚಾಸಾ-6 ರವರ ಪರಿಚಯ ಇದೆ. ಚಾಸಾ-8 ರಿಂದ 10 ರವರ ಪರಿಚಯ ಇಲ್ಲ. ಚಾಸಾ-11 ನಮ್ಮ ಕಾಕಿ. ನನಗೆ ಆರೋಪಿಯ ಪರಿಚಯವಿಲ್ಲ.

ಸುಮಾರು 2-3 ವರ್ಷಗಳ ಹಿಂದೆ ನಾನು ಕಬ್ಬು ಕಡಿಯುವ ಸಲುವಾಗಿ ಕೆಲಸಕ್ಕೆ ಹೋಗಿದ್ದಾಗ ಚಾಸಾ-6 ರವರು ಸಾಯಂಕಾಲ 6-00 ಗಂಟೆಗೆ ಚಾಸಾ-1 ರವರಿಗೆ ಕರೆ ಮಾಡಿ ನಮ್ಮ ಕಾಕ ನಾರಾಯಣ ಕಾಸರ ಇವರಿಗೆ ಕಲಘಟಗಿಯ ಜ್ಯೈ ಹಿಂದ ಧಾಬಾ ಹತ್ತಿರ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಾನು ಹಾಗೂ ಚಾಸಾ-1 ರವರು ಸುದ್ದಿ ತಿಳಿದು ಸಾಯಂಕಾಲ 7-00 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿರುತ್ತೇವೆ. ನಮ್ಮ ಕಾಕನ ತಲೆಗೆ ಕೈಗಳಿಗೆ ತೀವ್ರತರಹದ ಗಾಯಗಳಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂತರ ಒಂದು ಟಾಟಾ ಏಸ್ ವಾಹನದಲ್ಲಿ ಕಲಘಟಗಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. ಚಾಸಾ-6 ರವರನ್ನು ವಿಚಾರಿಸಿದಾಗ ನಮ್ಮ ಕಾಕ ಲೋನಾ ವಾಹನದ ಮೇಲೆ ಜುಂಜನಬೈಲ ಗ್ರಾಮಕ್ಕೆ ಹೋಗುವಾಗ ಎದುರಿನಿಂದ ಬರುತ್ತಿದ್ದ ಕಾರ ಡಿಕ್ಕಿ ಪಡಿಸಿ ಅಪಘಾತ ಪಡಿಸಿದೆ ಎಂದು ತಿಳಿಸಿರುತ್ತಾರೆ. ಅಪಘಾತ ಪಡಿಸಿದ ಕಾರ ನಂಬರ ಹೇಳಲು ಬರುವುದಿಲ್ಲ. ಈ ಬಗ್ಗೆ ಚಾಸಾ-1 ರವರು ಪೋಲೀಸರಿಗೆ ದೂರು ನೀಡಿರುತ್ತಾರೆ. ನಾನು ಘಟನೆ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ. ನಾನು ಪೋಲೀಸ ಠಾಣೆಗೆ ಹೋಗಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,** ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 06.10.2022 ರಂದು ಅಪಘಾತವಾಗಿದೆ ಎಂದರೆ ನಿಜ. ಚಾಸಾ-1 ರವರ ಜೊತೆಗೆ ಸ್ಥಳಕ್ಕೆ ಹೋದಾಗ ಚಾಸಾ-6 ರವರು ಸಾಯಂಕಾಲ 6 ಗಂಟೆಗೆ ಕಾರವಾರ ಕಡೆಯಿಂದ ಕಲಘಟಗಿ ಕಡೆಗೆ ಬರುತ್ತಿದ್ದ ಕಾರನ್ನು ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ತನ್ನ ಮುಂದೆ ಇದ್ದ ಲಾರಿಯನ್ನು ಓವರಟೇಕ್ ಮಾಡಲು ಹೋಗಿ ತನ್ನ ಮುಂದೆ ಹೊರಟ್ಟಿದ್ದ ಲುನಾ ವಾಹನಕ್ಕೆ ಡಿಕ್ಕಿ ಪಡಿಸಿದ ಹಾಗೂ ಅಪಘಾತದ ರಬಸಕ್ಕೆ ನಮ್ಮ ಕಾಕ ಪುಟಿದು ಕಾರಿನ ಗ್ಲಾಸಗೆ ಬಡಿದು ರಸ್ತೆ ಮೇಲೆ ಬಿದ್ದ ಸದರಿಯವರು ಸ್ಥಳಕ್ಕೆ ಹೋಗಿ ನೋಡಿದಾಗ ಕಾರ ಚಾಲಕ ಸ್ವಲ್ಪ ಮುಂದೆ ನಿಲ್ಲಿಸಿ ಕಳಗೆ ಇಳಿದು ರಸ್ತೆ ಮೇಲೆ ನಮ್ಮ ಕಾಕನಿಗೆ ನೋಡಿ ಕಾರನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋದ ಎಂದು

ತಿಳಿಸಿದರು ಅಂದರೆ ನಿಜ. ಸದರಿ ಕಾರಿನಲ್ಲಿ 3 ಜನರು ಇದ್ದರು ಅಂದರೆ ನಿಜ. ಅಪಘಾತ ಪಡಿಸಿದ ಕಾರ ನಂ ಕೆಎ-42-ಎ-5975 ಮತ್ತು ಮೋಟಾರ ಸೈಕಲ್ ನಂ ಕೆಎ-25-ಇವಾಯ್-7616 ಎಂದು ಗೊತ್ತಾಯಿತು ಅಂದರೆ ನಿಜ. ಎರಡು ವಾಹನಗಳು ಜಖಂಗೊಂಡಿದ್ದವು ಅಂದರೆ ನಿಜ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಅಂದರೆ ನಿಜ. ದಿನಾಂಕ 08.10.2022 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದು ಅಪಘಾತ ಪಡಿಸಿದ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿದ್ದು ನಾನು ನೋಡಿ ಗುರುತಿಸಿದ್ದೇನೆ ಆತನ ಹೆಸರು ಉಮೇಶ ವೀರಭದ್ರಪ್ಪ ಕಳ್ಳಿಮನಿ, ಸಾಃ ವಿಠಲಾಪುರ ಎಂದು ತಿಳಿದು ಬಂತು ಅಂದರೆ ಸರಿಯಲ್ಲ. ಚಾಸಾ-8 ರಿಂದ 10 ರವರ ಹೆಸರು ತಿಳಿದುಬಂದಿರುತ್ತದೆ ಅಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರ ಮುಂದೆ ನಿಪಿ-13 ರಂತೆ ಪುರವಣಿ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯನ್ನು ಪೋಲೀಸ ಠಾಣೆಯಲ್ಲಿ ನೋಡಿ ಗುರುತಿಸಿ ಪುರವಣಿ ಹೇಳಿಕೆ ನೀಡಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಆರ್ ಜಿ ವಕೀಲರಿಂದಃ**

ಅಪಘಾತ ಯಾರ ತಪ್ಪಿನಿಂದ ಆಗಿದೆ ಎನ್ನುವದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**